ನಿಮ್ಮಿಬ್ಬರ ತಿಂಗಳ ಸಂಬಳ ಒಂದು ಕಾಯಿಲೆ ಬಂದರೆ ಕೇವಲ ಕಡ್ಲೇಪುರಿ. ನಾಳೆ ನಿಮ್ಮ ಮಕ್ಕಳಿಗೆ ಎಂತಹಾ ಶಿಕ್ಷಣ ಕೊಡಿಸುತ್ತೀ? ನಮ್ಮ ಕಾಲದಲ್ಲಿ ಕಡಿಮೆ ಸಂಬಳ ಸಾಕಾಗುತ್ತಿತ್ತು. ಈಗ ಯಾವುದು ಕಡಿಮೆಗೆ ಸಿಗುತ್ತದೆ ಹೇಳು? ಆರ್ಥಿಕ ಸ್ವಾವಲಂಬನೆಯಿಲ್ಲದವನನ್ನು ಕಟ್ಟಿಕೊಂಡರೆ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯವೇ ಇಲ್ಲ. ಆದರ್ಶಗಳೆಲ್ಲಾ ಸರಿಯೇ. ಆದರೆ ವಾಸ್ತವಿಕತೆಯತ್ತ ನೋಡು. ನನ್ನ ಅಪ್ಪ ಅಮ್ಮ ಆಸ್ತಿ ಮಾಡಲಿಲ್ಲ. ನಾನು ಅದು ಹೇಗೋ ಒಂದು ಮನೆ ಮಾಡಿಕೊಂಡೆ. ಅದಕ್ಕೂ ಸಾಲ ಮಾಡಬೇಕಾಯಿತು. ಪರ್ಮನೆಂಟು ಕೆಲಸ ಇದ್ದೂ ನನ್ನ ಪರಿಸ್ಥಿತಿ ಹೀಗೆ. ಸ್ವಲ್ಪ ಯೋಚನೆ ಮಾಡು ದುಡುಕಬೇಡ'.

ಇವಳು ಅಪ್ಪನಿಗೆ ಉತ್ತರ ಬರೆಯುವ ಗೋಜಿಗೆ ಹೋಗಲಿಲ್ಲ. ರಜೆಯಲ್ಲಿ ಮನೆಗೆ ಬಂದಾಗೆಲ್ಲಾ ಅಪ್ಪನ ಕಣ್ಣು ತಪ್ಪಿಸಿ ಓಡಾಡುತ್ತಿದ್ದಳು. 'ಅಮ್ಮ ಅಪ್ಪನನ್ನು ನೀನು ಒಪ್ಪಿಸು. ನೀನು ನನ್ನ ಮದುವೆಗೆ ಒಪ್ಪಿಗೆ ನೀಡಬೇಕು. ನೀವೇ ಮುಂದೆ ನಿಂತು ಮದುವೆ ಮಾಡಿಸಬೇಕು. ಓಡಿ ಹೋದವಳು ಎಂದು ನಾಳೆ ಯಾರೂ ನನ್ನನ್ನು ಹೇಳಬಾರದು. ಮದುವೆಯ ನಂತರವೂ ನೀವು ನನಗೆ ಬೇಕು' ಎಂದು ಇವಳು ಹೇಳುತ್ತಿದ್ದುದು ರಾಯರ ಕಿವಿಗೆ ಸ್ಪಷ್ಟವಾಗಿ ಬಿದ್ದಿತ್ತು. ತನ್ನ ಪತ್ರಕ್ಕೆ ಇವಳು ಒಂದು ಹ್ಞಾಂ ಎನ್ನಲಿಲ್ಲ; ಹ್ಞೂಂ ಎನ್ನಲಿಲ್ಲ ಎಂದು ಬೇಸರವೂ ಆಯಿತು. ರಾತ್ರಿ ಟೀಚರು ಇವಳ ಪ್ರಸ್ತಾಪ ತೆಗೆದರು. 'ಮಗಳು ನಿನ್ನಲ್ಲಿ ಹೇಳಿದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ನಾನು ಯಾರ್‍ಯಾರ ಕೃಪಾಭಿಕ್ಷೆಯಿಂದ ಬೆಳೆದೆ; ಓದಿದೆ. ಇವಳಿಗೆ ನಾವು ಏನು ಕಡಿಮೆ ಮಾಡಿದ್ದೇವೆ? ಇವಳು ಆರಿಸಿದ ಹುಡುಗನ ಜಾತಿಯ ಬಗ್ಗೆ ನನ್ನ ಆಕ್ಷೇಪ ಇಲ್ಲ. ಆದರೆ ಪರ್ಮನೆಂಟು ಉದ್ಯೋಗವಿಲ್ಲ, ಆದಾಯವಿಲ್ಲ. ಅವನು ಹೇಗೆ ಕುಟುಂಬವನ್ನು ಸಾಕುತ್ತಾನೆ? ನಾನೆಷ್ಟು ದಿವಸ ಬದುಕಿಯೇನು? ಪೆನ್‌ಶನ್ ಬಿಟ್ಟರೆ ನಮಗೆ ಬೇರೇನಿದೆ? ಕಷ್ಟ ಕಾಲದಲ್ಲಿ ಇವಳಿಗೆ ಯಾರು ನೆರವಾಗುತ್ತಾರೆ?' ಟೀಚರು ಸಮಾಧಾನಿಸಿದರು. 'ಎಲ್ಲಾ ಅವರವರ ವಿಧಿ. ಅವನು ಅಷ್ಟು ದೂರದವನು ನಿಮ್ಮನ್ನು ಚಿಕಿತ್ಸೆಗೆ ಒಯ್ದ ಆಸ್ಪತ್ರೆಗೆ ಬರಬೇಕೆ? ಅಲ್ಲೇ ಅವರಿಗೆ ಪರಿಚಯವಾಗಿ ಈಗದು ಈ ಮಟ್ಟಕ್ಕೆ ಬೆಳೆದು ನಿಂತಿದೆಯೆಂದರೆ ನಮ್ಮ ಕೈ ಮೀರಿದ ವಿಷಯವದು. ಅವಳ ವಿಧಿಯಿದ್ದಂತಾಗಲಿ. ಅವರವರ ಬದುಕು ಅವರವರಿಗೆ. ಕಟ್ಟಿಕೊಂಡವನು ಹೇಗಾದರೂ ಸಂಸಾರ ನಡೆಸುತ್ತಾನೆ'.

ರಾಯರಿಗೆ ವಿಧಿಯಲ್ಲಿ ವಿಶ್ವಾಸವಿರಲಿಲ್ಲ. ಆದರೆ ಈ ಸಂಭವವನ್ನು ಯಾವ ಹೆಸರಿನಿಂದ ಕರೆಯುವುದು ಎಂದು ಅವರಿಗೆ ಗೊತ್ತಾಗಲಿಲ್ಲ. ಅವರ ಮೆಂಟಲ್ ಡಿಪ್ರೆಶನ್ ಕಾಲದಲ್ಲಿ ಟೀಚರು ಮತ್ತು ಇವಳು ಅವರನ್ನು ಮಾನಸಿಕ ತಜ್ಞರಲ್ಲಿಗೆ ಒಯ್ದಿದ್ದರು. ಅಲ್ಲಿಗೆ ಅವನು ತನ್ನ ಅಣ್ಣನ ಆಟಿಸಂ ವಾಸಿ ಮಾಡಲು ಬಂದಿದ್ದ. ಅವನು ಸುಂದರನಾಗಿದ್ದ.; ಚಾಲಾಕಿತನವಿತ್ತು. ಆಕರ್ಷಕವಾಗಿ ಮಾತಾಡಬಲ್ಲವನಾಗಿದ್ದ.



ಇವಳದು ಸೋಶಿಯಲ್ ನೇಚರ್. ಅದು ಹೇಗೆ ಅವರಿಬ್ಬರ ನಡುವೆ ಪ್ರೀತಿ ಬೆಳೆಯಿತೋ? ತನ್ನನ್ನೇಕೆ ಅದೇ ಆಸ್ಪತ್ರೆಗೆ ಒಯ್ದರೋ? ಅದೇ ಕಾಲದಲ್ಲಿ ಅವನೇಕೆ ಅಲ್ಲಿಗೇ ಅಣ್ಣನನ್ನು ಕರೆತಂದನೋ? ಎಲ್ಲವೂ ಕಾಕತಾಳೀಯ. ಅವನನ್ನು ಮದುವೆ ಆದರೆ ಇವಳ ಫಾರಿನ್ ಓದು, ಹಾರ್ವರ್ಡ್ ರೀಸರ್ಚ್ ಎಲ್ಲದಕ್ಕೂ ತಿಲಾಂಜಲಿ ನೀಡಬೇಕಾಗುತ್ತದೆ. ಹಾಗಾದರೆ ಮದುವೆಯೊಂದೇ ಜೀವನದ ಉದ್ದೇಶವೇ? ಟೀಚರ್ ಮದುವೆ ನಂತರ ಇಂಗ್ಲೀಷ್ ಲಿಟರೇಚರ್ ಮಾಡಿಕೊಂಡರು. ಅವರ ಓದಿಗೆ ತಕ್ಕ ಕೆಲಸ ಸಿಗಲಿಲ್ಲ. ಇವಳು ಲಿಟರೇಚರ್‌ನಲ್ಲಿ ಜಾಣೆ. ಇವಳಿಗೆ ಶಾಶ್ವತ ಕೆಲಸ ಅಷ್ಟರಿಂದ ಸಿಗುವುದಿಲ್ಲ. ಇವಳ ಮದುವೆಗೆ ತಾನು ಒಪ್ಪದಿದ್ದರೆ ನಾಳೆ ಅವನೊಡನೆ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ಮಾಲೆ ಹಾಕಿಕೊಂಡು ಇಬ್ಬರೂ ಬಂದು ಕಾಲು ಹಿಡಿಯುತ್ತಾರೆ. ಹೇಗೂ ಮದುವೆಯಾಗುತ್ತಾಳೆ ಎಂದಾದರೆ ತಾನೇ ಮುಂದೆ ನಿಂತು ಮದುವೆ ಮಾಡಿಸುವುದೇ ಒಳ್ಳೆಯದು. ರಾಯರು ಹ್ಞೂಂಗುಟ್ಟಿದರು.

ಇನ್ನು ಎರಡು ದಿನಗಳಲ್ಲಿ ಮದುವೆ. ತೀರಾ ಸರಳವಾದ ಕುವೆಂಪು ಮಂತ್ರ ಮಾಂಗಲ್ಯ. ವರನ ಕಡೆಯವರಿಗೆ ಅನುಕೂಲವಾಗಲೆಂದು ಕುಪ್ಪಳಿಯಲ್ಲೇ ಅದರ ಆಯೋಜನೆ. ರಾಯರು ಮತ್ತು ಟೀಚರು ತಮ್ಮ ಆತ್ಮೀಯರ ಪಟ್ಟಿ ಮಾಡಿಕೊಂಡು ಆಮಂತ್ರಣ ಹಂಚಿದರು. ಅವರು ಕೇಳಿದ ಪಶ್ನೆಗಳಿಗೆಲ್ಲಾ ಉತ್ತರಿಸಲು ಹರಸಾಹಸ ಪಟ್ಟರು. ಇವಳು ಹಾಯಾಗಿದ್ದಳು. ಅಂದು ರಾತ್ರಿ ರಾಯರಿಗೆ ನಿದ್ದೆ ಬರಲಿಲ್ಲ. ಇವಳು ಎರಡು ದಿನಗಳಲ್ಲಿ ಮನೆಬಿಟ್ಟು ಹೋಗುತ್ತಾಳೆ. ಎಳವೆಯಲ್ಲಿ ಇವಳನ್ನು ಹೆಗಲ ಮೇಲೆ ಕೂರಿಸಿ ಎಲ್ಲಿಗೆಲ್ಲಾ ಒಯ್ಯುತ್ತಿದ್ದರು? ಆ ಅವಸ್ಥೆಯಲ್ಲಿ ಊರ ಜಾತ್ರೆ ದಿನ ರಾಯರನ್ನು ನೋಡಿದವರು ಆಶ್ಚರ್ಯಪಟ್ಟಿದ್ದರು. ಇವಳು ಬೆಳೆಯುತ್ತಿದ್ದಂತೆ ಹೆಗಲ ಮೇಲೆ ಕೂರುವ ಭಾಗ್ಯ ತಪ್ಪಿ ಹೋಗಿತ್ತು. ಇವಳು ನಾನೇಕೆ ದೊಡ್ಡವಳಾಗುತ್ತಿದ್ದೇನೆ ಎಂದು ರಾಯರೆದುರು ಹೇಳಿಕೊಳ್ಳುತ್ತಿದ್ದಳು. ಒಂದು ಸಲ ಆಸೆ ತಡೆಯಲಾಗದೆ 'ಅಪ್ಪಾ, ನಾನು ನಿನ್ನ ಹೆಗಲ ಮೇಲೆ ಕೂರಲಾ' ಎಂದು ಕೇಳಿದ್ದಳು. ಹನ್ನೆರಡರ ಇವಳನ್ನು ರಾಯರು ಹೆಗಲ ಮೇಲೆ ಕೂರಿಸಿದ್ದರು! ಇವಳು ಕೇಳಿದ್ದೆಲ್ಲಾ ಸಿಗುತ್ತಿತ್ತು. ಕ್ರಿಸ್ಮಸ್ ಮುನ್ನಾ ದಿನ ಇವಳು ಇರಿಸಿದ ಕಾಲುಚೀಲಗಳಲ್ಲಿ ಮರುದಿನ ಸಾಂತಾಕ್ಲಾಸ್ ಇವಳಿಗೆ ಬೇಕಾದುದನ್ನು ತುಂಬಿಸಿ ಇಡುತ್ತಿದ್ದ! ಇವಳು ಕಷ್ಟ ಕಾಣದೆ ಬೆಳೆದಳು. ಇನ್ನು ಇವಳು ನೀರಿಗಾಗಿ ಕೊಡ ಹಿಡಿದುಕೊಂಡು ನಾಲ್ಕೈದು ಮೈಲಿ ಅಲೆಯಬೇಕು! ಇವಳಿಗೆ ಮೀನು ಕೋಳಿಯೆಂದರೆ ಪ್ರಾಣ. ಅವೆರಡನ್ನು ಅಡುಗೆ ಮನೆಗೆ ಸೇರಿಸದ ಆ ಸಂಪ್ರದಾಯಸ್ಥರ ಮನೆಯಲ್ಲಿ ಪುಳಿಚಾರ್ ತಿಂದು ಬದುಕಬೇಕು! ತನಗೆ ಹೊಟ್ಟೆಗೆ ಸಾಕಷ್ಟು ಇಲ್ಲದ, ತೊಡಲು ಬೇಕಷ್ಟು ಸಿಗದ ದಿನಗಳು ರಾಯರಿಗೆ ನೆನಪಾದವು. ನಾಳೆ ಇವಳಿಗೆ ಹುಟ್ಟುವ ಮಕ್ಕಳ ಗತಿ ಹೇಗೆಯೋ?

ಟೀಚರು ಯೋಚಿಸುತ್ತಿದ್ದರು. ತನ್ನ ದುಡಿಮೆಯಲ್ಲಿ ಮಾಡಿದ ಚಿನ್ನವನ್ನು ಇವಳಿಗೆ ಹಾಕಿ ಬಿಡುವುದು. ರಾಯರ ಹೆಸರಲ್ಲಿ, ತನ್ನ ಹೆಸರಲ್ಲಿರುವ ಫಿಕ್ಸೆಡ್ ಡಿಪಾಸಿಟುಗಳನ್ನು ಮಗಳ ಹೆಸರಿಗೆ ಮಾಡಿ ಬಿಡುವುದು. ಇರುವ ಮನೆಯನ್ನು ಮಗಳ ಹೆಸರಿಗೆ ಬರೆಸುವುದು. ತಾನು ಇರುವ ತನಕ ಮಗಳಿಗೆ ಏನೂ ತೊಂದರೆ ಬಾರದಂತೆ ನೋಡಿಕೊಳ್ಳುವುದು. ಆದರೆ ಇವರು ಕೆಲಸ ಮಾಡುವ ಕಂಪನಿಗಳು ಮುಚ್ಚಿಹೋದರೆ ಏನು ಗತಿ ಎಂಬ ಚಿಂತೆ ಅವರನ್ನು ಕಾಡಿತು. ಅವರೂ ನಿದ್ದೆ ಮಾಡಲಿಲ್ಲ. ತನಗೆ ನಿದ್ದೆ ಬಾರದ್ದು ಟೀಚರಿಗೆ ಗೊತ್ತಾಗದಂತೆ ರಾಯರು, ಟೀಚರಿಗೆ ನಿದ್ದೆ ಬಾರದ್ದು ರಾಯರಿಗೆ ಗೊತ್ತಾಗಬಾರದೆಂದು ಟೀಚರು ಮಗ್ಗಲು ಬದಲಾಯಿಸಲಿಲ್ಲ.

ಬೆಳಗಾಯಿತು. ಟೀಚರು ಎದ್ದು ಮನೆಕೆಲಸದಲ್ಲಿ ತೊಡಗಿಸಿಕೊಂಡವರಿಗೆ ತಲೆ ಸುತ್ತಿದಂತಾಗಿ ಅಲ್ಲೇ ಸೋಫಾದಲ್ಲಿ ಒರಗಿದರು. ಇವಳು ಬಂದವಳು 'ಏನಾಯಿತಮ್ಮಾ, ರಾತ್ರಿ ನಿದ್ದೆ ಬರಲಿಲ್ವಾ?' ಎಂದು ಪ್ರಶ್ನಿಸಿದಳು. 'ಈಗೇನೂ ಆಗಿಲ್ಲ. ಮುಂದೆ ಹೇಗೋ?' ಟೀಚರ ಪ್ರಶ್ನಾಸಹಿತದ ಉತ್ತರ ಕೇಳಿ ರಾಯರು ಟೀಚರೇ ಉತ್ಸಾಹ ತೋರಿ ಮಾಡಿದ್ದ ಪುಟ್ಟ ಉದ್ಯಾನವನವನ್ನು ನೋಡಿದರು. ಅಲ್ಲಿನ ಗಿಡಬಳ್ಳಿಗಳು ಅವರಿಗೆ ಅಂದು ಅಸ್ಪಷ್ಟವಾಗಿ ಕಾಣಿಸತೊಡಗಿದಾಗ ರಾಯರು ನಿಟ್ಟುಸಿರುಬಿಟ್ಟರು.

(ಮಲೆಯಾಳಂ ಕಥೆಯೊಂದರಿಂದ ಸ್ಫೂರ್ತಿ ಪಡೆದು)